ಉತ್ತರ ಕನ್ನಡ ಜಿಲ್ಲೆಯ ಕೆಡಿಸಿಸಿ ಬ್ಯಾಂಕ್‌ನಲ್ಲಿ ನೌಕರರ ನೇಮಕಾತಿ ಬಗ್ಗೆ

೨೮೪. ಶ್ರೀ ಆರ್. ಎಸ್. ನಾಯ್ಕ (ಭಟ್ಕಳ್).—

ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಹಕಾರ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯ ಕೆಡಿಸಿಸಿ ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿರುವ ನೌಕರರ ಸಂಖ್ಯೆ ಎಷ್ಟು.

ಆ) ನೌಕರರಲ್ಲಿ ಬಿಸಿ, ಬಿಸಿಎಂ, ಬಿಸಿಟಿ, ಬಿಟಿ, ಎಸ್‌ಸಿ, ಎಸ್‌ಟಿ ನೌಕರರುಗಳ ಸಂಖ್ಯೆ ಎಷ್ಟು.

ಇ) ಸದರಿ ಬ್ಯಾಂಕಿನಲ್ಲಿ ನೌಕರರನ್ನು ಸೇರಿಸಿಕೊಳ್ಳುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸುತ್ತಿದ್ದಾರೆಯೇ.

ಈ) ಮುಂದುವರೆದ ನೌಕರರ ಸಂಖ್ಯೆ ಬ್ಯಾಂಕಿನಲ್ಲಿ ಜಾಸ್ತಿ ಇದ್ದಲ್ಲಿ ಇನ್ನು ಮುಂದೆ ಎಲ್ಲಾ ವರ್ಗಗಳ ಸಮತೋಲನ ಕಾಯ್ದುಕೊಳ್ಳಲು ಏನಾದರೂ ವ್ಯವಸ್ಥೆ ಮಾಡಲಾಗುವುದೇ ?.

ಉ) ಮುಂದುವರೆದ ನೌಕರರ ಸಂಖ್ಯೆ ಪ್ರಮಾಣಕ್ಕಿಂತ ಜಾಸ್ತಿ ಇದ್ದಲ್ಲಿ ಅದಕ್ಕೆ ಕಾರಣರಾದವರು ಯಾರು ?

ಶ್ರೀ ಆರ್. ಎಲ್. ಜಾಲಪ್ಪ.(ಸಹಕಾರ ಮಂತ್ರಿಗಳು)

ಅ) ೨೪೭

ಆ) ವಿವಿಧ ವರ್ಗಗಳ ನೌಕರರ ವಿವರಗಳು ಈ ಕೆಳಗಿನಂತೆ ಇವೆ.

ಬಿಸಿಎಂ	೬೪
ಬಿಸಿಟಿ	೧೫೫
ಬಿಎಸ್‌ಜಿ	೮
ಬಿಟಿ	೩
ಎಸ್‌ಸಿ,ಎಸ್‌ಟಿ.	೧೨
ಜಿಎಂ	೧೪೪
ಒಟ್ಟು	೨೪೭

ಇ) ಹೌದು. (೧೯೭೭ ರ ಸರ್ಕಾರಿ ಆದೇಶ ಬಂದ ನಂತರ ಅದನ್ನು ಪಾಲಿಸಲಾಗುತ್ತಿದೆ.

ಈ) ರೋಸ್ಟರ್ ಪದ್ಧತಿಯ ಪ್ರಕಾರ ಎಲ್ಲಾ ವರ್ಗಗಳ ಸಮತೋಲನ ಕಾಯ್ದುಕೊಳ್ಳಲು ಸರ್ಕಾರದಆಜ್ಞೆಯಂತೆ ಕ್ರಮ ಕೈಗೊಳ್ಳಲಾಗುವುದು.

ಉ) ಆಗ, ಹಿಂದುಳಿದ ವರ್ಗಗಳಲ್ಲಿನ ಜನರು ಮುಂದೆ ಬರದಿರಬಹುದು.

ತಿಪಟೂರು ತಾಲ್ಲೂಕಿನ ವಿಶ್ವಕರ್ಮ ಕೈಗಾರಿಕೆಯ ಸಂಘ

೧೭೯. ಶ್ರೀ ಎಸ್ ಪಿ. ಗಂಗಾಧರಪ್ಪ (ತಿಪಟೂರು)— ಸಹಕಾರ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ತಿಪಟೂರು ತಾಲ್ಲೂಕಿನ ವಿಶ್ವಕರ್ಮ ಕೈಗಾರಿಕಾ ಸಂಘದ ಮೆಷನರಿ ಕಿಟಕಿ, ಬಾಗಿಲು ಒಂದೂ ಇಲ್ಲದೇ ಯಾರು ನೋಡಿಕೊಳ್ಳದೆ ಇರುವ ವಿಚಾರ ಸರಕಾರದವರ ಗಮನಕ್ಕೆ ಬಂದಿದೆಯೆ.

(ಆ) ಈ ಸಂಘದವರಿಗೆ ಕೊಟ್ಟಿರುವ ಸಾಲ ಎಷ್ಟು.

(ಇ) ಎಷ್ಟು ವಸೂಲಾಗಿದೆ.

(ಈ) ಬಾಕಿ ವಸೂಲಿಗೆ ಸರಕಾರದವರ ತೆಗೆದುಕೊಂಡ ಕ್ರಮಗಳೇನು ?